ಶ್ರೀ ಎಂ. ನಾಗಪ್ಪ.—ತಾವು ಈಗ ಬೆಟರ್‌ಮೆಂಟ್ ಫೀಸ್ ವಸೂಲುಮಾಡುತ್ತಾ ಇರುವುದು ಹಿಂದೆ ಹಾಕಿದಂಥ ಫೀಸನ್ನು ನಿರ್ಮೂಲಮಾಡಿದರಲ್ಲಾ ಆ ಫೀಸಿಗಿಂತ ಜಾಸ್ತಿಯಾಗುತ್ತದೆ. ಅವರು ಈಗ ಕೊಡುವ ಲೈಬ್ರರಿ ಫೀ ಸ್ಕೋಲ್ಟ್ಸ್ ಫೀ, ಇವನೆಲ್ಲಾ ಬೆಟರ್‌ಮೆಂಟ್ ಫೀಸಿಗೆ ಕೂಡಿಸಿದರೆ ಹಿಂದೆ ಹಾಕುತ್ತಿದ್ದ ಫೀಸಿಗಿಂತ ಬಹಳ ಹೆಚ್ಚಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ರಾಯಚೂರು ಜಿಲ್ಲೆಯಲ್ಲಿ ಕೆಲವು ಖಾಸಗಿ ಶಾಲೆಗಳು ಟ್ಯೂಷನ್ ಫೀಸ್ ವಸೂಲುಮಾಡುತ್ತಿದ್ದಾರೆಂದು ದೂರು ಕೊಟ್ಟರೂ ಮತ್ತು ಜೆಲಗ್ಯಾಂ ಮಾಡಿದರೂ ಇದುವರಗೆ ಏನು ಕ್ರಮವನ್ನು ತೆಗೆದು ಕೊಂಡಿಲ್ಲ ಆದಕ್ಕೆ ಕಾರಣವೇನು ?

ಶ್ರೀ ಕೆ. ವಿ. ಶಂಕರಗೌಡ.—ಮೊದಲಗಿಂತ ಈಗ ಬೆಟರ್‌ಮೆಂಟ್ ಫೀಸ್ ಮತ್ತು ಇತರ ಫೀಸ್‌ಗಳು ಎಲ್ಲಾ ಸೇರಿದರೂ ಅಷ್ಟು ಜಾಸ್ತಿಯಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದ್ದು ಸತ್ಯಕ್ಕೆ ದೂರವಾದಂಥ ಮಾತು. ರಾಯಚೂರು ಜಿಲ್ಲೆಯಲ್ಲಿ ಆ ರೀತಿ ವಸೂಲು ಮಾಡಿದ್ದು ನಮ್ಮ ಗಮನಕ್ಕೆ ಬಂದರೆ ಅದರ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಬಿಲ್ಡಿಂಗ್ ಫಂಡ್ ಎಂದು ಕೆಲವು ಕಡೆಗಳಲ್ಲಿ ವಸೂಲು ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಈ ವಿಚಾರವನ್ನು ಮಂತ್ರಿಗಳ ಗಮನಕ್ಕೆ ತರಬೇಕೋ ಅಥವಾ ಡೈರೆಕ್ಟರ್ ಅವರ ಗಮನಕ್ಕೆ ತರಬೇಕೋ ? ಏಕೆಂದರೆ ಎಲ್ಲಾ ಕಡೆಗಳಲ್ಲಿ ಕಾಂಗ್ರೆಸ್ ಪಕ್ಷದವರೇ ಸೇರಿಕೊಂಡಿರುತ್ತಾರೆ. ಆ ರೀತಿ ವಸೂಲು ಮಾಡುತ್ತಿದ್ದರೆ ಅವರುಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾವು ಯಾರಿಗೆ ತಿಳಿಸಬೇಕು ? ಅದರ ಬಗ್ಗೆ ಮಂತ್ರಿಗಳು ಈಗ ಏನು ಹೇಳುತ್ತಾರೆ ?

Sri K. V. SHANKARA GOWDA.—It is a wild imagination of the Hon'ble Member. It has neither been brought to my notice nor to the notice of the Director of Public Instruction. The matter has to be investigated. After investigation, action will be taken.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ವಿದ್ಯಾ ಮಂತ್ರಿಗಳು ಈ ಪ್ರಶ್ನೆಗೆ ಉತ್ತರ ಹೇಳುವಾಗ ಬೆಟರ್‌ಮೆಂಟ್ ಫೀಸನ್ನು ಮಾಡಿರುವ ಉದ್ದೇಶ ಟ್ಯೂಷನ್ ಫೀಸ್ ಮತ್ತು ಇತರ ಫೀಸುಗಳನ್ನು ರದ್ದುಮಾಡುವುದಕ್ಕೋಸ್ಕರವೆಂದು ಹೇಳಿದರು. ಈಗ ಬೆಟರ್‌ಮೆಂಟ್ ಫೀಸನ್ನು ಹಾಕಿರುವುದರಿಂದ ಟ್ಯೂಷನ್ ಫೀಸನ್ನು ವಸೂಲುಮಾಡುವ ಕ್ರಮ ಎಲ್ಲಾ ನಮ್ಮ ಪಂಗಡದವರಿಗೆ ಮೊದಲಿನಿಂದಲೂ ಇರಲಿಲ್ಲವಾದ್ದರಿಂದ ಈಗ ಬೆಟರ್‌ಮೆಂಟ್ ಫೀಸ್ ಜೊತೆಯಲ್ಲಿ 10-15 ರೂಪಾಯಿಗಳನ್ನು ಬಿಲ್ಡಿಂಗ್ ಫಂಡಿಗೆ ಎಂದಾಗಿ ತೆಗೆದುಕೊಳ್ಳುವುದರಿಂದ ಬಹಳವಾಗಿ ತೊಂದರೆಯಾಗಿರುವುದರಿಂದ ಎಲ್ಲಾ ನಮ್ಮ ಪಂಗಡದವರಂತೆ ಮೊಲದ್ದಂತೆ ರಿಯಾಯಿತಿ ತೋರಿಸಿ ಸ್ಕೋಲ್ಟ್ಸ್ ಲೈಬ್ರರಿ ಫೀಸನ್ನು ಮಾತ್ರ ವಸೂಲುಮಾಡಿ ಇತರ ಎಲ್ಲಾ ಫೀಸುಗಳನ್ನು ವಸೂಲುಮಾಡದೇ ಇರುವ ಹಾಗೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಅದು ಸಾಧ್ಯವಿಲ್ಲ.

Plying of Direct bus Between Bangalore and Coondapur

215. Sri SUBBA RAO HALSNAD (Baindoor).—

Will the Minister for Information, Publicity and Transport and Tourism be pleased to state :—

(*a*) whether the Government is aware that there are no direct buses plying between Bangalore to Coondapoor (South Kanara District and *vice versa* ;

(*b*) if so, whether there is any proposal to ply a bus between Bangalore to Coondapoor direct early ?

A.—Sri MOHAMED ALI (Minister for Information, Publicity and Transport and Tourism).—

(*a*) Yes.
(*b*) Yes.

ಶ್ರೀ ಸುಬ್ಬರಾವ್ ಹಲ್ಸನದ್.—ಈ ಮಾರ್ಗದಲ್ಲಿ ಬಸ್ ಲೈನನ್ನು ಹಾಕುವುದಕ್ಕೆ ಇನ್ನೂ ಎಷ್ಟು ಕಾಲ ಬೇಕಾಗುತ್ತದೆ ?

Sri MOHAMED ALI.—The Road Transport Corporation has applied for a permit and as soon as the permit is granted by R.T.A., arrangements will be made to extend the service to Coondapur.

ಶ್ರೀ ಬಿ. ಎಂ. ಇದಿನಬ್ಬ.—ಈಗ ಬೆಂಗಳೂರು-ಕುಂದಾಪುರಕ್ಕೆ ನೇರವಾಗಿ ಬಸ್ ಚಾಲು ಮಾಡುವ ಯೋಜನೆ ಇದೆ. ಅದು ಮಂಗಳೂರು ಮಾರ್ಗವಾಗಿ ಹೋಗುತ್ತದೋ ಅಥವಾ ಅಗುಂಬಿ ಮಾರ್ಗವಾಗಿ ಹೋಗುತ್ತದೋ ?

Sri MOHAMED ALI.—It is difficult to say. Long back we have applied for the permit.

Sri G. CHANDRAKANTH.—Has it come to the notice that delay is caused in R.T.A. Office ? Do you propose to take action ?

Sri MOHAMED ALI.—It has come to our notice that many cases are delayed in this office. The Government cannot take action against this R.T.A. because it is a Quasi judicial body.

ಶ್ರೀ ಎ. ರಾಮಚಂದ್ರ.—ಬೆಂಗಳೂರಿನಿಂದ ಉಡುಪಿಗೆ ಹೋಗುವಾಗ ಅದು ಯಾವ ಮಾರ್ಗವಾಗಿ ಹೋಗುತ್ತದೆ ?

Sri MOHAMED ALI.—It will go *via* Udipi. This service is from Bangalore to Udipi and it will be extended to Coondapur.

Sri B. VITTAL DAS SHETTY.—May I know whether it is possible for the luxury bus running from Bangalore to Mangalore to stop at Coondapur ?

Sri MOHAMED ALI.—If the Hon'ble Member puts another question, I will be able to answer because this question does not arise out of it.

ಶ್ರೀ ಎಂ. ನಾಗಪ್ಪ.—(ಬಿ) ಪ್ರಶ್ನೆಯಲ್ಲಿ ಇಂಗ್ಲಿಷ್ ಕಾಪಿಯಲ್ಲಿ ಕೊನೆಯಲ್ಲಿ 'ಅರ್ಲಿ' ಎಂದು ಕೇಳಿದ್ದಕ್ಕೆ ಉತ್ತರ 'ಎಸ್' ಎಂದು ಹೇಳಿದೆ. ಎಷ್ಟು ಅವಧಿಯಲ್ಲಿ ಅದನ್ನು ಮಾಡುತ್ತೀರಿ ಎಂಬುದನ್ನು ಹೇಳಲಿಲ್ಲ. ತಮ್ಮಲ್ಲಿ 'ಅರ್ಲಿ' (early) ಅಂದರೆ ಎಷ್ಟು ವರ್ಷಗಳು, ಎಷ್ಟು ತಿಂಗಳುಗಳು ?

Sri MOHAMED ALI.—I do not have those details.

ಶ್ರೀ ಸುಬ್ಬರಾವ್ ಹಲ್ಸನದ್.—ಈ ಮಾರ್ಗವನ್ನು ಭಟ್ಕಳ್ ವರೆಗೆ ಮುಂದುವರಿಸಲು ಸಾಧ್ಯವಾಗುತ್ತದೆಯೇ ?

Sri MOHAMED ALI.—We have applied for a permit. As soon as it is made available to us, arrangements will be made to extend this service.

ಶ್ರೀ ಸುಬ್ಬರಾವ್ ಹಲ್ಸನದ್.—ಆ ರೀತಿ ಮಾಡುವುದರಿಂದ, ಕುಂದಾಪುರದಿಂದ ಅಲ್ಲಿ ನೇರವಾಗಿ ಬಸ್ಸುಗಳು ಹೋಗುವುದಕ್ಕೆ ಅನುಕೂಲವಾಗುವುದಿಲ್ಲವೇ ?

Sri MOHAMED ALI.—We have introduced another service from Bhatkal *via* some other route.

ಶ್ರೀ ಸುಬ್ಬರಾವ್ ಹಲ್ಸನದ್.—ಭಟ್ಕಳ್-ಗಂಗೊಳ್ಳಿ ಸರ್ವಿಸ್‌ನ್ನು ಕುಂದಾಪುರದಿಂದ ಮುಂದುವರಿಸುವುದು ಸಾಧ್ಯವೇ ?

Sri MOHAMED ALI.—That has got to be examined separately.